**Code No. 08 X(C)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ತಾನೊಂದು ಬಗೆದರೆ, ದೈವವೊಂದು ಬಗೆದಂತೆ ಎಂಬ ಮಾತು ಜನಜನಿತವಾಗಿದೆ. ಮನುಷ್ಯ ಎಷ್ಟೇ ಬುದ್ಧಿವಂತನಾದರೂ, ಅನೇಕ ಸಂಶೋಧನೆಗಳನ್ನು ಮಾಡಿ ವಿಜ್ಞಾನಿ ಆಗಿದ್ದರೂ, ಕೆಲವು ಸಂಗತಿಗಳಲ್ಲಿ ಮುಂದಿನ ಕ್ಷಣದಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ಊಹಿಸಲು ಅಸಾಧ್ಯ. ಮನುಷ್ಯ ಸಾಕಷ್ಟು ಹಣ ಸಂಪಾದಿಸಿ, ಸುಖದ ಸುಪ್ಪತ್ತಿಗೆಯಲ್ಲಿ ವಿರಾಜಮಾನ ಆಗಿದ್ದರೂ, ಅವನಿಗೆ ಒಂದು ರೀತಿಯ ಭೀತಿ ಕಾಡುತ್ತಲೇ ಇರುತ್ತದೆ. ಅದು ಅನಿಶ್ಚಿತತೆಯ ಭಯ, ಅನಾರೋಗ್ಯದ ಭಯ. ಅಪಘಾತವಾಗಿ ಬಿಡುವ ಭಯ, ಸಾವಿನ ಭಯ ಹೀಗೆ ಅನೇಕ ರೀತಿಯಲ್ಲಿ ಭಯ ಅವನನ್ನು ನೆಮ್ಮದಿಯಿಂದ ಇರಲು ಬಿಡದೆ ಚಿಂತಾಕ್ರಾಂತ ಆಗುವಂತೆ ಮಾಡುತ್ತದೆ. ಈ ಭಯಗಳಿಂದ ಹೊರಬರಲು ಆತ ದೇವರ ಮೊರೆ ಹೋಗುತ್ತಾನೆ.

ದೇವರನ್ನು ಸಂತೃಪ್ತಿ ಗೊಳಿಸಿದರೆ, ದೇವರು ತನ್ನನ್ನು ಸಂತೃಪ್ತವಾಗಿಸಿ ಬಿಡುತ್ತಾನೆ ಎಂಬ ನಂಬಿಕೆ ಎಂದು ಹೇಳಿ ಸ್ವಾರ್ಥವನ್ನು ಹೊಂದಿರುತ್ತಾನೆ. ಆ ಕಾರಣಕ್ಕೆ ಕಾಣಿಕೆ, ಹರಕೆ, ಅಲಂಕಾರ, ಅಭಿಷೇಕ, ಉತ್ಸವಗಳ ಮೂಲಕ ದೇವರನ್ನು ಸಂಪ್ರೀತಿಗೊಳಿಸಲು ಯತ್ನಿಸುತ್ತಾನೆ. ಹೀಗೆ ದೇವರಿಗೆ ಹಣ ಖರ್ಚು ಮಾಡಿ ಒಲಿಸಿಕೊಳ್ಳುವ ಹಾಗಿದ್ದರೆ ಅನೇಕ ಶ್ರೀಮಂತರು ದೇವರನ್ನು ತಮ್ಮ ಮನೆಯಲ್ಲಿಯೇ ಕಟ್ಟಿಹಾಕಿ, ಬಲವಂತದ ಮಾಘಸ್ನಾನ ಮಾಡಿಸಿ ನೆಮ್ಮದಿಯಿಂದ ಇದ್ದು ಬಿಡುತ್ತಿದ್ದರು. ಆದರೆ ಅದು ಅಷ್ಟು ಸುಲಭದ ವಿಷಯ ಅಲ್ಲ. ಆಡಿಸುವಾತನ ಕೈ ಚಳಕದಲ್ಲಿ ಎಲ್ಲಾ ಅಡಗಿದೆ ಎನ್ನುವ ಹಾಗೆ ಸೂತ್ರದ ಗೊಂಬೆಯಂತೆ, ಸನ್ನಿವೇಶದ ಗೊಂಬೆ ಆಗುತ್ತಾನೆ ಮನುಷ್ಯ.

ಕೆಲವರು ಏನೇನೋ ಬಯಸಿದರೆ ಅದು

ಸಿಗಲು ಸಾಧ್ಯವಿಲ್ಲ. ಹಾಗೆಯೇ ಮತ್ತೆ ಕೆಲವರು ಕನಸಿನಲ್ಲೂ ಕಾಣಲಾಗದ ಸಂಗತಿಗಳು ನಿಜಜೀವನದಲ್ಲಿ ಸಂಭವಿಸಿ ಆಶ್ಚರ್ಯವನ್ನು ಉಂಟು ಮಾಡಬಹುದು. ಅನೇಕ ಖ್ಯಾತನಾಮರು ತಮ್ಮ ಮಕ್ಕಳಿಗೆ ತಮ್ಮ ಕಲೆಯನ್ನು ಧಾರೆಯೆರೆದು ಇನ್ನಿಲ್ಲದಂತೆ ಪ್ರೋತ್ಸಾಹ ನೀಡುತ್ತಾ ಇದ್ದರೂ, ದುರಾದೃಷ್ಟವೋ ಏನೋ ಅವರ ಮಕ್ಕಳು ಮೂಲೆ ಗುಂಪಾಗಿ ಬಿಡುತ್ತಾರೆ. ರೈಲ್ವೆ ನಿಲ್ದಾಣದಲ್ಲಿ ಹೊಟ್ಟೆಪಾಡಿಗಾಗಿ ಹಾಡುತ್ತಿದ್ದ ಹಿಂದಿ ಗಾಯಕಿ ರಾನುಮೊಂಡಲ್ ದಿನ ಬೆಳಗಾಗುವುದರ ಒಳಗೆ ಸಿನಿಮಾ ಗಾಯಕಿಯಾಗಿ ರೂಪುಗೊಂಡು ಹಣ, ಖ್ಯಾತಿಯನ್ನು ಗಳಿಸಿ ದಿಗ್ಭ್ರಮೆ ಮೂಡಿಸಿದಾಗ ಅದು ಕೆಲವರಿಗೆ ಮಾತ್ರ ಅದೃಷ್ಟದಾಟ ಎನಿಸಿ ಬಿಡುತ್ತದೆ. ಅದೃಷ್ಟ ಅನ್ನಬೇಕೋ, ಪರಿಶ್ರಮ ಎನ್ನಬೇಕೋ ತಿಳಿಯುವುದಿಲ್ಲ. ಪರಿಶ್ರಮದಿಂದ ಜೀವನದಲ್ಲಿ ಮೇಲೆ ಬರಬಹುದು ಎಂಬ ನಂಬಿಕೆ. ಆದರೆ ಇದು ಎಲ್ಲಾ ಕ್ಷೇತ್ರಕ್ಕೂ ಅನ್ವಯಿಸುವುದಿಲ್ಲ.

ಹಾಗೆಯೇ ಕೇವಲ ಪರಿಶ್ರಮದಿಂದ ಮಾತ್ರ ಯಶಸ್ಸು ಗಳಿಸಲು ಸಾಧ್ಯವಿಲ್ಲ. ಪರಿಶ್ರಮದ ಜೊತೆಗೆ ಕನಸುಗಳು ಬೇಕು. ಮಹತ್ವಾಕಾಂಕ್ಷೆ ಹೊಂದಿರಬೇಕು. ಸತತ ಪ್ರಯತ್ನ ಇರಬೇಕು, ಜೊತೆಗೆ ವ್ಯವಹಾರ ಚತುರತೆ ಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ಸಾಮರ್ಥ್ಯ ತೆಗೆದುಕೊಳ್ಳುವ ಮನೋಬಾವ ಇರಬೇಕು, ಮನುಷ್ಯ ಎನಿಸಿದಂತೆ ನಡೆಯಲು ಸಾಧ್ಯವಿಲ್ಲ. ಕೆಲವೊಮ್ಮೆ ಅತಿಯಾದ ಆತ್ಮವಿಶ್ವಾಸವೂ, ಅಹಂಕಾರವೂ ಮನುಷ್ಯನ ಸೋಲಿಗೆ ಕಾರಣವಾಗಿ ಬಿಡುತ್ತದೆ. ಮನುಷ್ಯ ತಾನು ಮಾಡುವ ಸದಾಚಾರ, ದುರಾಚಾರದ ಅನುಸಾರವಾಗಿ ಪಾಪಪುಣ್ಯಗಳ ಲೆಕ್ಕವನ್ನು ಮೇಲೊಬ್ಬ ಇಟ್ಟಿರುತ್ತಾನೆ. ಅದನ್ನರಿತೆಯೇ, ಸ್ವರ್ಗನರಕ ಪ್ರಾಪ್ತಿ ಆಗುತ್ತದೆ. ಎನ್ನುವುದು ನಂಬಿಕೆ. ಎಷ್ಟೋ ಸಜ್ಜನರು ಕಿರಿಯ ವಯಸ್ಸಿಗೆ ಶಿವನಪಾದ ಸೇರಿ ಬಿಡುತ್ತಾರೆ. ದುರ್ಜನರು ತಮ್ಮ ಕೆಟ್ಟ ಕೃತ್ಯಗಳನ್ನು ಮಾಡುತ್ತಾ ಶತಾಯುಷಿ ಆಗಿರುತ್ತಾರೆ. ಅದನ್ನೆಲ್ಲಾ ನೋಡಿದಾಗ ಹರನೆ ನಿನ್ನಾಟ ಬಲ್ಲವರು ಯಾರು ಎಂಬಂತೆ ಆಗುತ್ತದ. ಭೂಮಿಯ ಮೇಲೆ ಯಾವುದೂ ಪೂರ್ವ ನಿಶ್ಚಿತವಲ್ಲ, ದೇವದೂತ ಎನಿಸಿಕೊಂಡವನೂ ಒಂದು ದಿನ ಮಣ್ಣು ಪಾಲುಗುತ್ತಾನೆ. ಪ್ರಕೃತಿಯ ಮುಂದೆ ಯಾರೂ ದೊಡ್ಡವರು ಅಲ್ಲ. ನಮಗೆ ಯಾವುದೇ ರೋಗರುಜಿನಗಳು ಬರುವುದಿಲ್ಲ ಅಂತಲೂ, ಅವನು ಕೆಟ್ಟವನು ಮಾರಾಣಾಂತಿಕ ರೋಗ ಬಂದು ಸಾಯುತ್ತಾನೆ ಎಂದು ಭಾವಿಸುವುದು ತಪ್ಪು.